# ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ

## 2019–20 ನೇ ಸಾಲಿನ ಮಾದರಿ ಪ್ರಶ್ನೆ ಪತ್ರಿಕೆ –1

ವಿಷಯ: ದ್ವಿತೀಯ ಭಾಷೆ ಕನ್ನಡ ( ಶಾಲಾ ಅಭ್ಯರ್ಥಿಗಳಿಗೆ ) ವಿಷಯ ಸಂಕೇತ: **33 K**

ಸಮಯ: 2.30 ಗಂಟೆ ಗರಿಷ್ಠ ಅಂಕಗಳು: 80

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 4*1=4

1.' ಮುದ' ಪದ ನೀಡುವ ಅರ್ಥ

ಎ) ಮುದುಡು ಬಿ) ಆನಂದ

ಸಿ) ಅನಂತ ಡಿ) ದುಃಖ

2. 'ಆಶ್ಚರ್ಯ' ಪದದ ತದ್ಭವ ರೂಪ

ಎ) ಆತುರ ಬಿ) ಚಾತುರ್ಯ

ಸಿ) ಅಚ್ಚರಿ ಡಿ) ಆಚಾರ

3. 'ಜೀವನದಲ್ಲಿ' ಪದದಲ್ಲಿರುವ ವಿಭಕ್ತಿ ಪ್ರತ್ಯಯದ ಹೆಸರು

ಎ) ಪ್ರಥಮ ವಿಭಕ್ತಿ ಬಿ) ದ್ವಿತೀಯ ವಿಭಕ್ತಿ

ಸಿ) ಷಷ್ಠಿ ವಿಭಕ್ತಿ ಡಿ) ಸಪ್ತಮಿ ವಿಭಕ್ತಿ

4. ' ಮಂದಾರ' ಪದದಲ್ಲಿರುವ ಮಾತ್ರೆಗಳ ಸಂಖ್ಯೆ

ಎ) ಐದು ಮಾತ್ರೆ ಬಿ) ಆರು ಮಾತ್ರೆ

ಸಿ) ನಾಲ್ಕು ಮಾತ್ರೆ ಡಿ) ಮೂರು ಮಾತ್ರೆ

II. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ 12*1=12

5. ಬೇಡನು ಪ್ರಾಣಿಗಳನ್ನು ಕೊಲ್ಲಲು ಮಾಡುತ್ತಿದ್ದ ಉಪಾಯ ಯಾವುದು?

6. ಸರ್ವಜ್ಞ ನು ತಿಳಿಸುವಂತೆ ಕೋಟಿ ವಿದ್ಯೆಗಳಲ್ಲಿ ಯಾವ ವಿದ್ಯೆ ಮೇಲು?

7. ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ?

8.ಗುರುಗಳು ತಿಳಿಸುವಂತೆ ಯಾವುದನ್ನು ಚೆನ್ನಾಗಿ ಆಸ್ವಾದಿಸಬೇಕು?

9. ಲಂಡನ್ ನಗರದಲ್ಲಿರುವ ವ್ಯಾಕ್ಸ್ ಮ್ಯುಸಿಯಂ ಗೆ 'ಟುಸ್ಸೋಡ್' ಎಂಬ ಹೆಸರು ಹೇಗೆ ಬಂತು?

10.ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಹೇಗೆ ಕಾಣಿಸುತ್ತಿದ್ದವು?

11.ಬದುಕಿನಲ್ಲಿ ಸಿಡುಕು ಮಿಡುಕನ್ನು ತೊರೆದು ಹೇಗಿರಬೇಕೆಂದು ಕವಿ ಹೇಳಿದ್ದಾರೆ?

12.ಅಡಿಗರು ತಿಳಿಸುವಂತೆ ನರನಲ್ಲಿ ಯಾರರೂಪವನ್ನು ಕಾಣಬೇಕಾಗಿದೆ?

13. ಜನರ ಬಾಯಿಂದ ಬಾಯಿಗೆ ಹರಿದು ಬಂದ ಸಾಹಿತ್ಯ ಯಾವುದು?

14.ಸೊನ್ನಲಿಗೆ ಸಿದ್ಧರಾಮರ ವಚನಗಳ ಅಂಕಿತನಾಮವೇನು?

15.ಅಕ್ಕ ಮಹಾದೇವಿಯವರು ತಮ್ಮ ಬದುಕು ಯಾವಾಗ ಫಲದಾಯಕವಾಗುತ್ತದೆಂದು ಹೇಳಿದ್ದಾರೆ?

16. ಬಸವಣ್ಣನವರು ಮರ ಮತ್ತು ಜಲ ಏನಾಗುತ್ತವೆ ಎಂದು ವಚನದಲ್ಲಿ ಹೇಳಿದ್ದಾರೆ?

III. ಕೆಳಗಿನ ಪ್ರಶ್ನೆಗಳಿಗೆ ಮೂರು –ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ . 8*2=16

17. ಹಕ್ಕಿಗಳಲ್ಲಿರುವ ಅಲಂಕಾರಪ್ರಜ್ಞೆ ಗೂಡಿನಲ್ಲಿ ಹೇಗೆ ವ್ಯಕ್ತವಾಗಿದೆ?

18 . ಹಕ್ಕಿಗಳು ಯಾವ ಉದ್ದೇಶಕ್ಕಾಗಿ ಗೂಡನ್ನು ನಿರ್ಮಿಸುತ್ತವೆ?

19 . ಜೀವನ ಮತ್ತು ಕಾಫಿಯ ಬಗೆಗೆ ಗುರುಗಳು ನೀಡಿದ ಸಂದೇಶವೇನು?

20. ಟವರ್ ಆಫ್ ಲಂಡನ್ ಅನ್ನು ನಿಗೂಢ ಸ್ಥಳ ಎಂದು ಏಕೆ ಕರೆಯುತ್ತಾರೆ?

21. ಸಿ.ಪಿ.ಕೆ. ಅವರು ಮಾನವನ ಬದುಕು ಕರ್ಪೂರದಂತೆ ಇರಬೇಕೆಂದು ಏಕೆ ಹೇಳಿದ್ದಾರೆ?

22 . ಕುಣಿಗಲ್ ಕೆರೆಯು ಯಾವ ಜೀವ ಸಂಕುಲಗಳಿಗೆ ಆಶ್ರಯ ನೀಡಿತ್ತು?

23 . ಭೀಮನಾಯಕನು ವೈದ್ಯರಿಗೆ ಹೇಗೆ ಕೃತಜ್ಞತೆ ಸಲ್ಲಿಸಿದನು?

24 . 'ಹೊಂಗೆ ಬೇವುಗಳ ಹಾಡು' ಕವಿತೆಯಲ್ಲಿ ಕವಯಿತ್ರಿಗೆ ಯಾವ ಬಗೆಯ ಅಳುಕು ಇದೆ?

IV. ಕೆಳಗಿನ ಕವಿ /ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 1*3=3

25 . ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು

V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ. 1*3=3

26 . ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ
ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ
ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ
ಎಲ್ಲರೆದೆಗಳ ತುಂಬ ಸವಿಚೈತ್ರವು .

VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿ ಬರೆಯಿರಿ. 1*3=3

27 . 'ವನಜಮುಖಿಯರ ಮುಂದೆ ಸೊರಹಿದೆ'

VII. ಕೆಳಗಿನ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ. 1*3=3

28 . "ಕುಳಿತು ಉಂಡರೆ ಕುಡಿಕೆ ಹೊನ್ನು ಸಾಲದು"

ಅಥವಾ

"ಮಾಡಿದ್ದುಣ್ಣೋ ಮಹಾರಾಯ"

VIII. ಕೆಳಗಿನವುಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ . 5*3=15

29 . " ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ"

30 . "ನಿನ್ನಂಥ ಶ್ರೇಷ್ಠ ಪುತ್ರರತ್ನವೊಂದನ್ನು ಹೆತ್ತ ಭಾಗ್ಯ ನನ್ನದಾಗಲಿ"

31 . " ಈ ನೇರಿಲ ಹಣ್ಣು ಎಷ್ಟು ಕಪ್ಪಾಗಿವೆ !"

32 . " ಬೆಳೆಯಬಲ್ಲವರನ್ನು ಮಾತ್ರ ಎತ್ತಿ ಹಿಡಿಯುತ್ತೇನೆ "

33 . "ನನೆ ಬೇಕು ಕೊನೆಬೇಕು ನರನ ಬಾಳುವೆಗೆ"

IX. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1*4=4

34 . ಏಕಾಂಗಿ ವೀರನಂತೆ---------- ------------------
----- ------ ---------- ----------- -------
------ -------- ------------ ------------
---------- ------------ -------- ಕತ್ತಲಲ್ಲಿ ನಡೆದನು.

ಅಥವಾ

ಕಾಡು ಕಾಡು ಅಲೆದ -------- -----------------

-------- --------- ------- -----------------

--------- --------- --------- ------------ ---

------------ --------- ಮಹಾಬೆಳಕೊಂದು ಕಂಡಿತು.

X. ಕೆಳಗಿನ ಪ್ರಶ್ನೆಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1*4=4

35. ಅರ್ಜುನ ಮತ್ತು ಉತ್ತರ ಇವರ ಸಂಭಾಷಣೆಯ ಸ್ವಾರಸ್ಯವನ್ನು ನಿಮ್ಮ ಮೆಚ್ಚುಗೆಯ ಮಾತುಗಳೊಂದಿಗೆ ಬರೆಯಿರಿ.

ಅಥವಾ

ಅರ್ಜುನನ ಪರಾಕ್ರಮದ ಮಾತುಗಳನ್ನು ನೀವು ಮೆಚ್ಚುವ ಅಂಶಗಳೊಡನೆ ಬಣ್ಣಿಸಿರಿ .

XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರ ಬರೆಯಿರಿ. 1*4=4 [2+2]

36. ನಮಸ್ತೇ ಎನ್ನುತ್ತೇವೆ. ನಮಸ್ಕಾರ ಎನ್ನತ್ತೇವೆ. ಆ ರೀತಿ ಹೇಳಿದಾಗ ಎರಡು ಅಂಗೈಗಳನ್ನು ಜೋಡಿಸಿ ಮೇಲೆ ಎತ್ತುತ್ತೇವೆ. ಆ ರೀತಿ ಎತ್ತಿದ್ದರ ಜೊತೆಗೆ ತಲೆಯನ್ನು ಬಾಗಿಸುತ್ತೇವೆ. ಈ ರೀತಿಯ ನಮಸ್ಕಾರ ಮಾಡುವುದರ ಅರ್ಥವಿಶೇಷತೆ ಏನೆಂದರೆ ನಾವೆಲ್ಲ ಆತ್ಮಸ್ವರೂಪರು. ಆದ್ದರಿಂದ ನಾವೆಲ್ಲ ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು. ಆದಕಾರಣ ಪರಸ್ಪರವಾಗಿ ಪ್ರೇಮವನ್ನು ಕೊಟ್ಟು – ಪಡೆದು ಬದುಕಬೇಕಾಗಿದೆ. ಏಕೆಂದರೆ ನಾವೆಲ್ಲ ಪ್ರೇಮ ಸ್ವರೂಪರು. ಪ್ರೇಮವೇ ಆತ್ಮದ ನಿಜವಾದ ಸ್ವರೂಪವಾಗಿದೆ. ನಾವು ಪಡೆದಿರುವ ಬೇರೆ ಬೇರೆ ದೇಹಗಳು ಆತ್ಮದ ನಿಜವಾದ ಸ್ವರೂಪವನ್ನು ಅರಿಯಲು ಅಡ್ಡಿಯಾಗಿವೆ. ಈ ಅಡ್ಡಿಯನ್ನು ಆಗಿಂದಾಗ್ಗೆ ಪಕ್ಕಕ್ಕೆ ತಳ್ಳುವುದೇ ಈ ನಮಸ್ಕಾರವಿಧಿಯ ಉದ್ದೇಶ. ನಾವು ಎರಡು ಕೈ ಜೋಡಿಸಿ ಮಾಡುವ ನಮಸ್ಕಾರದ ಅರ್ಥ ಒಂದು ಕೈ ನಾವು, ಇನ್ನೊಂದು ಕೈ ನಾವು ಯಾರಿಗೆ ನಮಸ್ಕಾರ ಹೇಳುತ್ತೇವೆಯೋ ಅವರು. ನಮಸ್ಕಾರ ಮಾಡಿದಾಗ ನಮಗೂ ಅವರಿಗೂ ಇದು ನೆನಪಾಗುತ್ತದೆ. ನೆನಪಾಗಬೇಕು. ಎರಡು ಕೈ ಸೇರಿದರೆ ಚಪ್ಪಾಳೆಯಂತೆ. ಆದರೆ ನಮ್ಮ ನಮಸ್ಕಾರ ಚಪ್ಪಾಳೆಯಲ್ಲ. ಜೋಡಿಸಿದ ಕೈಯನ್ನು ಎತ್ತುವುದು 'ಆತ್ಮೋದ್ಧಾರ' ಎಂದು ನಾವು ತಿಳಿಯಬೇಕಾಗಿದೆ. ಗುರು ಹಿರಿಯರನ್ನು ಕಂಡಾಗ ಗೌರವದಿಂದ ತಲೆಬಾಗಿ ನಮಸ್ಕರಿಸುವುದು ನಮ್ಮ ಸಂಸ್ಕೃತಿಯ ಪ್ರತೀಕ, ಆತ್ಮೋದ್ಧಾರದ ಮಾರ್ಗ. ಜೀವನದಲ್ಲಿ ರೂಢಿಸಿಕೊಳ್ಳಬೇಕಾದ ಒಂದು ಮೌಲ್ಯ. ಈ ರೀತಿಯ ಜೀವನವನ್ನು ರೂಢಿಸಿಕೊಂಡು ನಮ್ಮ ವ್ಯಕ್ತಿತ್ವವನ್ನು ಇನ್ನಷ್ಟು ಸದೃಢವಾಗಿ ರೂಪಿಸಿಕೊಳ್ಳೋಣ. ನಮ್ಮ ಆತ್ಮೋದ್ಧಾರ ನಮ್ಮ ಕೈಯಲ್ಲೇ ಇದೆ.

ಪ್ರಶ್ನೆಗಳು :

36. ಅ) ಆತ್ಮದ ನಿಜವಾದ ಸ್ವರೂಪವನ್ನು ಹೇಗೆ ವಿವರಿಸಬಹುದು?

36. ಬ) ನಮಸ್ಕಾರದ ಅರ್ಥವಿಶೇಷತೆಯೇನು?

XII. ಕೆಳಗಿನ ಯಾವುದಾರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1*4=4

37. ವಿದ್ಯಾರ್ಥಿ ಜೀವನದಲ್ಲಿ ಶಿಸ್ತು

ಅಥವಾ

ಗ್ರಂಥಾಲಯದ ಸದ್ಬಳಕೆ

XIII. ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.

1*5=5

38. ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ 'ರಚನಾ' ಎಂದು ಭಾವಿಸಿಕೊಂಡು ಶಾಲೆಯಲ್ಲಿ ವನಮಹೋತ್ಸವ ಆಚರಣೆಗೆ ಸಸಿಗಳನ್ನು ಒದಗಿಸುವಂತೆ ಕೋರಿ, ಅರಣ್ಯಾಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಚಾಮರಾಜನಗರದ 'ವಚನ' ಎಂದು ಭಾವಿಸಿಕೊಂಡು ನೀವು ಕೈಗೊಂಡ ಪ್ರವಾಸದ ಬಗ್ಗೆ ಮಡಿಕೇರಿಯಲ್ಲಿರುವ ನಿಮ್ಮ ಗೆಳತಿ 'ಪ್ರಣತಿ' ಗೆ ಒಂದು ಪತ್ರ ಬರೆಯಿರಿ.

# ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ

## 2019-20 ನೇ ಸಾಲಿನ ಮಾದರಿ ಪ್ರಶ್ನೆ ಪತ್ರಿಕೆ -2

ವಿಷಯ: ದ್ವಿತೀಯ ಭಾಷೆ ಕನ್ನಡ ( ಶಾಲಾ ಅಭ್ಯರ್ಥಿಗಳಿಗೆ ) ವಿಷಯ ಸಂಕೇತ: 33 K

ಸಮಯ: 2-30 ಗಂಟೆ ಗರಿಷ್ಠ ಅಂಕಗಳು: 80

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 4*1=4

1.'ಕೆಳಕೆಳಗೆ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.

ಎ) ಅನುಕರಣ ಬಿ) ದ್ವಿರುಕ್ತಿ

ಸಿ) ಜೋಡುನುಡಿ ಡಿ) ಕೃದಂತ

2. 'ಮತ್ತೊಬ್ಬ' ಪದದಲ್ಲಿರುವ ಸಂಧಿ

ಎ) ಲೋಪ ಬಿ) ಆಗಮ

ಸಿ) ಆದೇಶ ಡಿ) ಸವರ್ಣದೀರ್ಘ

3. ಕ್ರಿಯಾಸಮಾಸಕ್ಕೆ ಉದಾಹರಣೆಯಾಗಿರುವ ಪದ

ಎ) ನೆಲಮುಗಿಲು ಬಿ) ಯುಗಾದಿ

ಸಿ) ಮೈಕೊಡವಿ ಡಿ) ಹೊಂಬಾಳೆ

4. "ರಾಜನು ಹಣ್ಣನ್ನು ತಿಂದನು." ಈ ವಾಕ್ಯವು ಇರುವ ಕಾಲ

ಎ) ಭೂತಕಾಲ ಬಿ) ವರ್ತಮಾನಕಾಲ

ಸಿ) ಭವಿಷ್ಯತ್ ಕಾಲ ಡಿ) ಸಂಧ್ಯಾಕಾಲ

II. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ 12*1= 12

5. ಇಂದ್ರನು ತನಗಾದ ಸಂತೋಷವನ್ನು ಯಾವ ರೀತಿ ಪ್ರಕಟಿಸಿದನು?

6. ಇಂದ್ರನಿಗೆ ಗಿಳಿಯನ್ನು ಕಂಡು ಏಕೆ ಆಶ್ಚರ್ಯವಾಯಿತು?

7. ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು?

8. ಪುಟ್ಟರಾಜುರು ಯಾವ ಕಾರಣಕ್ಕೆ ಖಾದಿಬಟ್ಟೆ ತೊಡಲು ನಿರ್ಧರಿಸಿದರು?

9. ಹಕ್ಕಿಯ ಗೂಡಿನಲ್ಲಿ ಯಾವ ಯಾವ ಭಾವನೆಗಳಿವೆ?

10. ಗುರುಗಳು ಯಾವುದನ್ನು ದುರ್ದೈವದ ಸಂಗತಿಯೆಂದು ಬಣ್ಣಿಸಿದರು?

11. ಥೇಮ್ಸ್ ನದಿಯ ಉತ್ತರ ಭಾಗದಲ್ಲಿ ಎಂತಹವರು ಹೆಚ್ಚಾಗಿ ವಾಸಿಸುತ್ತಾರೆ?

12. ಏಣಿ ಕವನದಲ್ಲಿ ತಿಳಿಸುವಂತೆ ಮೇಲೇರಿದವರು ಯಾವಾಗ ತ್ರಿಶಂಕುಗಳಾಗುತ್ತಾರೆ?

13. ಭೂಮಿತಾಯಿ ಯಾವಾಗ ನವವಧುವಿನಂತೆ ಸಿಂಗಾರಗೊಳ್ಳುತ್ತಾಳೆ?

14. ಅಡಿಗರು ತಿಳಿಸುವಂತೆ ಪೌರುಷದ ಬಾಳ್ವೆ ಯಾವುದು?

15. ಯಾವ ಸಂದರ್ಭದಲ್ಲಿ ಕೆರೆಗೆ ಬಾಗಿನ ಅರ್ಪಿಸುವ ವಾಡಿಕೆ ಇದೆ?

16. ವೇಷ ಮತ್ತು ಆಚರಣೆಗಳ ಸಂಬಂಧ ಹೇಗಿರಬೇಕೆಂದು ಸಿದ್ಧರಾಮರು ಹೇಳುತ್ತಾರೆ?

**III. ಕೆಳಗಿನ ಪ್ರಶ್ನೆಗಳಿಗೆ ಮೂರು –ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ . 8*2=16**

17. ಇಂದ್ರನ ಪ್ರಕಾರ ಸಾಮಾನ್ಯವಾದ ಲೋಕವರ್ತನೆ ಯಾವುದು?

18. ತಾಯಿ ಸಿದ್ದಮ್ಮ ಪುಟ್ಟರಾಜರನ್ನು ಯಾವ ರೀತಿ ಆಶೀರ್ವದಿಸಿದರು?

19. ಹಿರಿಯ ವಿದ್ಯಾರ್ಥಿಗಳು ಹೆಡ್‌ಮಾಸ್ತರರ ಹತ್ತಿರ ಯಾವ ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದರು?

20. ಏಣಿ ತಾನು ಎಂತಹವರಿಗೆ ಯಾವ ರೀತಿ ಸ್ಪಂದಿಸುತ್ತೇನೆಂದು ಹೇಳುತ್ತದೆ?

21. ಬಾಳೆಮೀನುಗಳು ಬೊಬ್ಬೆಹೊಡೆಯಲು ಕಾರಣವೇನು?

22. ಅಕ್ಕಮಹಾದೇವಿಯವರು ತಿಳಿಸುವಂತೆ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ಶ್ರೇಷ್ಠ ವಿಚಾರಗಳಾವುವು?

23. 'ಕಳ್ಳರ ಗುರು' ಪಾಠದಿಂದ ನಾವು ತಿಳಿದುಕೊಳ್ಳಬೇಕಾದ ನೀತಿಯೇನು?

24. ಕವಯಿತ್ರಿಯವರು ತಿಳಿಸುವಂತೆ ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕಾಗಿದೆ?

**IV. ಕೆಳಗಿನ ಕವಿ /ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 1*3=3**

25 . ಬಸವರಾಜ ಸಾದರ

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ. 1*3=3**

26 . ಕೆಸರೊಳಿದ್ದರು ಮೇಲೆ ಬಾಂದಳವ ನೋಡಿ
ಮಿಸುಪ ರವಿಕಿರಣಗಳ ಸಿರಿಗೆ ಮೆರೆದಾಡಿ
ಮಸಗುವಂಬುಜದಂತೆ ಧ್ಯೇಯದಾಳ್ವೆಸಕೆ
ಬಸಮಾಗು, ಬಂದ ಮನುಜತೆಯ ಸಾರ್ಥಕತೆಗೆ.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿ ಬರೆಯಿರಿ. 1*3=3**

27 . 'ನಿಂಬೆಯ ಹಣ್ಣಿನಂತೆ ತುಂಬಿದ ಕುಣಿಗಲು ಕೆರೆ'

**VII. ಕೆಳಗಿನ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ. 1*3=3**

28 . "ಬೆಳೆಯುವ ಸಿರಿ ಮೊಳಕೆಯಲ್ಲಿ"

ಅಥವಾ

"ದೇಶ ಸುತ್ತು ಕೋಶ ಓದು"

**VIII ಕೆಳಗಿನವುಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ . 5*3=15**

29 ."ಒಕ್ಕಲಿಗ ಒಕ್ಕದಿರೆ ಜಗವೆಲ್ಲ ಬಿಕ್ಕುವುದು"

30. "ಇಲ್ಲಿ ವಾಸ್ತುಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ."

31. "ಇವರೆಲ್ಲ ಬಸ್ಸೋ, ರೈಲೋ ಹಿಡಿಯಲು ತರಾತುರಿಯಿಂದ ಹೊರಟಿದ್ದರು."

32. "ಕಾಡು ಕಾಡು ಅಲೆದ ಅವಗೆ ನಾಡಿನರ್ಥ ಹೊಳೆಯಿತು."

33. " ಶಾಂತಿಯಲಿ ಬದುಕಿನೀ ಕರ್ತವ್ಯವನ್ನು ಮುಗಿಸು."

IX ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1*4=4

34 . ಕಡೆಗೆ ಹಾಯವು ಕಂಗಳೀಬಲ

____________________

______________________________

____________________

____________________

ಮೃಡನು ಶಿವಶಿವ ಕಾದಿಗೆಲಿದೆವು ಬಲಕೆ ನಮೊಯೆಂದ

ಅಥವಾ

ಎಂದೊಡರ್ಜುನ ನಗುತ ರಥವನು

____________________

______________________________

____________________

____________________

ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ

X ಕೆಳಗಿನ ಪ್ರಶ್ನೆಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1*4=4

35. ಗೋಪಾಲನು ತನ್ನ ತಾಯಿಯೊಂದಿಗೆ ನಡೆಸಿದ ಸಂಭಾಷಣೆಯ ಸಾರದಲ್ಲಿ ಜೀವನ ಮೌಲ್ಯವನ್ನು ಗುರುತಿಸಿ ಬರೆಯಿರಿ.

ಅಥವಾ

ಬನದ ಗೋಪಾಲ ಹಾಡಿನಲ್ಲಿ ಭಕ್ತಿಯ ಮಹತ್ತ್ವವನ್ನು ಹೇಗೆ ವರ್ಣಿಸಲಾಗಿದೆ ವಿವರಿಸಿ.

XI ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರ ಬರೆಯಿರಿ. 1*4=4 [2+2]

36. ಸಿ.ವಿ.ರಾಮನ್ ಶಿಷ್ಯನನ್ನು ಆರಿಸಿಕೊಂಡ ಮೇಲೆ ಅವನಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು, ಅವನನ್ನು ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು. ತಮ್ಮ ಶಿಷ್ಯರೂ ತಮ್ಮಂತೆಯೇ ವಿಜ್ಞಾನದ ಅಭ್ಯಾಸಿಗಳು, ತಮ್ಮ ನಡುವೆ ಮೇಲು ಕೀಳೆಂಬ ತಾರತಮ್ಯವಿರಕೂಡದು, ವಿಜ್ಞಾನದ ಅನ್ವೇಷಣಕಾರ್ಯದಲ್ಲಿ ನಾವೆಲ್ಲ ಸರಿಸಮಾನರಾದ ಕೆಲಸಗಾರರು ಎಂದು ಭಾವಿಸಿದ್ದರು. ಅದರಂತೆಯೇ ನಡೆದುಕೊಳ್ಳುತ್ತಿದ್ದರು. ಶಿಷ್ಯರು ನಡೆಸುವ ಸಂಶೋಧನೆ ಅತ್ಯುತ್ತಮ ವರ್ಗದ್ದಾಗಿರಬೇಕು, ಇತರರನ್ನು ಸುಮ್ಮನೆ ಅನುಸರಿಸುವುದು ಸರ್ವಥಾ ಕೂಡದು, ಸ್ವಂತಿಕೆ ಇರಬೇಕು, ಹೊಸ ದಾರಿಯನ್ನು ಗುರುತಿಸಿ ಮುಂದುವರೆಯಬೇಕು ಎಂದು ಒತ್ತಿ ಒತ್ತಿ ಹೇಳುತ್ತಿದ್ದರು. ಬೆಳಿಗ್ಗೆ ಪ್ರಯೋಗಾಲಯಕ್ಕೆ ಬಂದಕೂಡಲೆ ಒಂದು ಸುತ್ತು ಹೊರಟು ಎಲ್ಲ ಭಾಗಗಳಿಗೂ ಭೇಟಿಯಿತ್ತು, ಪ್ರತಿಯೊಬ್ಬ ಶಿಷ್ಯನೂ ಏನು ಮಾಡುತ್ತಿದ್ದಾನೆ, ಕೆಲಸದಲ್ಲಿ ಅವನ ಪ್ರಗತಿ ಎಷ್ಟು ಎಂದು ವಿಚಾರಿಸುತ್ತಿದ್ದರು. ಮುಂದೆ ಏನು ಮಾಡಬೇಕೆನ್ನುವ ವಿಷಯವಾಗಿ ಸಲಹೆಗಳನ್ನು ಕೊಡುತ್ತಿದ್ದರು.

ಶಿಷ್ಯನೇನಾದರೂ ಹೊಸ ವಿಷಯವೊಂದನ್ನು ಬಯಲಿಗೆ ತಂದಿದ್ದನೆಂದರೆ, ಬೆನ್ನುತಟ್ಟಿ, ಅವನನ್ನು ಎಲ್ಲರ ಎದುರಿಗೂ ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಶಿಷ್ಯರು ಗುರುವಿನ ಕೊಂಡಾಟದಿಂದ ಉಬ್ಬಿಹೋಗುತ್ತಿದ್ದರು. ಸಂಶೋಧನೆಗಳನ್ನು ಮತ್ತಷ್ಟು ಹುರುಪಿನಿಂದ ಮುಂದುವರೆಸುತ್ತಿದ್ದರು.

ಪ್ರಶ್ನೆಗಳು :

36. ಅ) ಶಿಷ್ಯರನ್ನು ಕುರಿತು ರಾಮನ್ ಅವರ ಮನೋಭಾವನೆ ಏನಾಗಿತ್ತು?

36. ಬ) ಶಿಷ್ಯರನ್ನು ಹುರಿದುಂಬಿಸುವ ರಾಮನ್ ಅವರ ದೈನಂದಿನ ಕಾರ್ಯವನ್ನು ತಿಳಿಸಿ.

XII ಕೆಳಗಿನ ಯಾವುದಾರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1*4=4

37. ಉತ್ತಮ ಹವ್ಯಾಸಗಳು

ಅಥವಾ

ಪ್ರವಾಹದಿಂದಾಗುವ ಅನಾಹುತಗಳು

XIII. ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*5=5

38. ನಿಮ್ಮನ್ನು ರಾಮಸಮುದ್ರ ಗ್ರಾಮದಲ್ಲಿರುವ 'ಸುರೇಶ' ಎಂದು ಭಾವಿಸಿಕೊಂಡು, ನಿಮ್ಮ ಊರಿನ ರಸ್ತೆಯನ್ನು ಸರಿಪಡಿಸಿಕೊಡುವಂತೆ ಕೋರಿ ಗ್ರಾಮಪಂಚಾಯಿತಿ ಅಧ್ಯಕ್ಷರಿಗೆ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ತುಮಕೂರಿನ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿ 'ಉಮ್ಮಿಸಲ್ಮ' ಎಂದು ಭಾವಿಸಿಕೊಂಡು ಶಾಲೆಯಲ್ಲಿ ನಡೆದ ವಿಜ್ಞಾನ ವಸ್ತುಪ್ರದರ್ಶನವನ್ನು ಕುರಿತು ಮಂಡ್ಯದಲ್ಲಿರುವ 'ಅಕ್ಬರ್ ಪಾಷ' ಎಂಬ ಹೆಸರಿನ ತಂದೆಗೆ ಪತ್ರ ಬರೆಯಿರಿ.

# ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ

## 2019–20 ನೇ ಸಾಲಿನ ಮಾದರಿ ಪ್ರಶ್ನೆ ಪತ್ರಿಕೆ –1

ವಿಷಯ: ದ್ವಿತೀಯ ಭಾಷೆ ಕನ್ನಡ (ಖಾಸಗಿ ಅಭ್ಯರ್ಥಿಗಳಿಗಾಗಿ) ವಿಷಯ ಸಂಕೇತ: 33 K

ಸಮಯ: 2–45 ಗಂಟೆ ಗರಿಷ್ಠ ಅಂಕಗಳು : 100

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 5*1=5

1.' ಮುದ' ಪದ ನೀಡುವ ಅರ್ಥ

ಎ) ಮುದುಡು ಬಿ) ಆನಂದ

ಸಿ) ಅನಂತ ಡಿ) ದುಃಖ

2. 'ಆಶ್ಚರ್ಯ' ಪದದ ತದ್ಭವ ರೂಪ

ಎ) ಆತುರ ಬಿ) ಚಾತುರ್ಯ

ಸಿ) ಅಚ್ಚರಿ ಡಿ) ಆಚಾರ

3. 'ಜೀವನದಲ್ಲಿ' ಪದದಲ್ಲಿರುವ ವಿಭಕ್ತಿ ಪ್ರತ್ಯಯದ ಹೆಸರು

ಎ) ಪ್ರಥಮ ವಿಭಕ್ತಿ ಬಿ) ದ್ವಿತೀಯ ವಿಭಕ್ತಿ

ಸಿ) ಷಷ್ಠಿ ವಿಭಕ್ತಿ ಡಿ) ಸಪ್ತಮಿ ವಿಭಕ್ತಿ

4. ' ಮಂದಾರ' ಪದದಲ್ಲಿರುವ ಮಾತ್ರೆಗಳ ಸಂಖ್ಯೆ

ಎ) ಐದು ಮಾತ್ರೆ ಬಿ) ಆರು ಮಾತ್ರೆ

ಸಿ) ನಾಲ್ಕು ಮಾತ್ರೆ ಡಿ) ಮೂರು ಮಾತ್ರೆ

5. ಸಂಬಂಧಾರ್ಥಕ ಅವ್ಯಯಕ್ಕೆ ಈ ಪದಗಳು ಉದಾಹರಣೆಯಾಗಿವೆ.:

ಎ) ಮತ್ತು, ಅಥವಾ ಬಿ) ಚೆನ್ನಾಗಿ, ತಟ್ಟನೆ

ಸಿ) ಅದೇ, ಇದೇ ಡಿ) ವರಗೆ, ಮಟ್ಟಿಗೆ

II. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ 14*1=14

6. ಬೇಡನು ಪ್ರಾಣಿಗಳನ್ನು ಕೊಲ್ಲಲು ಮಾಡುತ್ತಿದ್ದ ಉಪಾಯ ಯಾವುದು?

7. ಈ ನಾಡಿನ ಬೆನ್ನೆಲುಬು ಎಂದು ರೈತನನ್ನು ಏಕೆ ಕರೆಯುತ್ತಾರೆ?

8. ಸರ್ವಜ್ಞ ನು ತಿಳಿಸುವಂತೆ ಕೋಟಿ ವಿದ್ಯೆಗಳಲ್ಲಿ ಯಾವ ವಿದ್ಯೆ ಮೇಲು?

9. ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ?

10. ಗುರುಗಳು ತಿಳಿಸುವಂತೆ ಯಾವುದನ್ನು ಚೆನ್ನಾಗಿ ಆಸ್ವಾದಿಸಬೇಕು?

11. ಲಂಡನ್ ನಗರದಲ್ಲಿರುವ ವ್ಯಾಕ್ಸ್ ಮ್ಯುಸಿಯಂ ಗೆ 'ಟುಸ್ಸೋಡ್' ಎಂಬ ಹೆಸರು ಹೇಗೆ ಬಂತು?

12.ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಹೇಗೆ ಕಾಣಿಸುತ್ತಿದ್ದವು?

13. ತಿಮಿರದ ವೈರಿ ಯಾವುದು?

14.ಬದುಕಿನಲ್ಲಿ ಸಿಡುಕು ಮಿಡುಕನ್ನು ತೊರೆದು ಹೇಗಿರಬೇಕೆಂದು ಕವಿ ಹೇಳಿದ್ದಾರೆ?

15.ಅಡಿಗರು ತಿಳಿಸುವಂತೆ ನರನಲ್ಲಿ ಯಾರ ರೂಪವನ್ನು ಕಾಣಬೇಕಾಗಿದೆ?

16. ಜನರ ಬಾಯಿಂದ ಬಾಯಿಗೆ ಹರಿದು ಬಂದ ಸಾಹಿತ್ಯ ಯಾವುದು?

17.ಸೊನ್ನಲಿಗೆ ಸಿದ್ಧರಾಮರ ವಚನಗಳ ಅಂಕಿತನಾಮವೇನು?

18.ಅಕ್ಕ ಮಹಾದೇವಿಯವರು ತಮ್ಮ ಬದುಕು ಯಾವಾಗ ಫಲದಾಯಕವಾಗುತ್ತದೆಂದು ಹೇಳಿದ್ದಾರೆ?

19. ಬಸವಣ್ಣನವರು ಮರ ಮತ್ತು ಜಲ ಏನಾಗುತ್ತವೆ ಎಂದು ವಚನದಲ್ಲಿ ಹೇಳಿದ್ದಾರೆ?

III. ಕೆಳಗಿನ ಪ್ರಶ್ನೆಗಳಿಗೆ ಮೂರು –ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ . 12*2=24

20. ಬಾಲಕ ಪುಟ್ಟಯ್ಯ ಬಾಲ್ಯದಲ್ಲಿ ಕಣ್ಣುಗಳನ್ನು ಹೇಗೆ ಕಳೆದುಕೊಂಡರು?

21. ಹಕ್ಕಿಗಳಲ್ಲಿರುವ ಅಲಂಕಾರಪ್ರಜ್ಞೆ ಗೂಡಿನಲ್ಲಿ ಹೇಗೆ ವ್ಯಕ್ತವಾಗಿದೆ?

22. ಹಕ್ಕಿಗಳು ಯಾವ ಉದ್ದೇಶಕ್ಕಾಗಿ ಗೂಡನ್ನು ನಿರ್ಮಿಸುತ್ತವೆ?

23. ಜೀವನ ಮತ್ತು ಕಾಫಿಯ ಬಗೆಗೆ ಗುರುಗಳು ನೀಡಿದ ಸಂದೇಶವೇನು?

24. ಟವರ್ ಆಫ್ ಲಂಡನ್ ಅನ್ನು ನಿಗೂಢ ಸ್ಥಳ ಎಂದು ಏಕೆ ಕರೆಯುತ್ತಾರೆ?

25. ಬನದಗೋಪಾಲನ ವೇಷಭೂಷಣಗಳು ಹೇಗಿದ್ದವು ತಿಳಿಸಿ.

26. ರೂಪಕವಾಗಿ ಬಳಸಿರುವ ಏಣಿಯು ನೀಡುವ ಸಂದೇಶವೇನು?

27. ಸಿದ್ಧಾರ್ಥನಿಗೆ ನಾಡಿನ ಅರ್ಥ ತಿಳಿದ ಸಂದರ್ಭವನ್ನು ಕವಿ ಹೇಗೆ ಬಣ್ಣಿಸಿದ್ದಾರೆ?

28. ಸಿ.ಪಿ.ಕೆ. ಅವರು ಮಾನವನ ಬದುಕು ಕರ್ಪೂರದಂತೆ ಇರಬೇಕೆಂದು ಏಕೆ ಹೇಳಿದ್ದಾರೆ?

29. ಕುಣಿಗಲ್ ಕೆರೆಯು ಯಾವ ಜೀವ ಸಂಕುಲಗಳಿಗೆ ಆಶ್ರಯ ನೀಡಿತ್ತು?

30. ಭೀಮನಾಯಕನು ವೈದ್ಯರಿಗೆ ಹೇಗೆ ಕೃತಜ್ಞತೆ ಸಲ್ಲಿಸಿದನು?

31. 'ಹೊಂಗೆ ಬೇವುಗಳ ಹಾಡು' ಕವಿತೆಯಲ್ಲಿ ಕವಯಿತ್ರಿಗೆ ಯಾವ ಬಗೆಯ ಅಳುಕು ಇದೆ?

**IV.** ಕೆಳಗಿನ ಕವಿ /ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. **2*3=6**

32 . ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು

33. ಶ್ರೀ ಎಮ್. ಗೋಪಾಲಕೃಷ್ಣ ಅಡಿಗರು

**V.** ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ. **1*3=3**

34 . ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ
ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ
ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ
ಎಲ್ಲರೆದೆಗಳ ತುಂಬ ಸವಿಚೈತ್ರವು .

**VI.** ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿ ಬರೆಯಿರಿ. **1*3=3**

35 . 'ವನಜಮುಖಿಯರ ಮುಂದೆ ಸೊರಹಿದೆ'

**VII.** ಕೆಳಗಿನ ಗಾದೆಮಾತುಗಳಲ್ಲಿ ಯಾವುದಾದರೂ ಎರಡನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ **2*3=6**

36 . "ಕುಳಿತು ಉಂಡರೆ ಕುಡಿಕೆ ಹೊನ್ನು ಸಾಲದು"

ಅಥವಾ

"ಮಾಡಿದ್ದುಣ್ಣೋ ಮಹಾರಾಯ"

37. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?

ಅಥವಾ

ಮಾತು ಬೆಳ್ಳಿ; ಮೌನ ಬಂಗಾರ

VIII. ಕೆಳಗಿನವುಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ . 6*3=18

38. " ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ"

39 . "ನಿನ್ನಂಥ ಶ್ರೇಷ್ಠ ಪುತ್ರರತ್ನವೊಂದನ್ನು ಹೆತ್ತ ಭಾಗ್ಯ ನನ್ನದಾಗಲಿ"

40. "ಲಂಡನ್ ಮಲಗಿ ನಿದ್ರಿಸುತ್ತದೆಯೇ ಅನಿಸುತ್ತದೆ."

41. " ಈ ನೇರಿಲ ಹಣ್ಣು ಎಷ್ಟು ಕಪ್ಪಾಗಿವೆ !"

42. " ಬೆಳೆಯಬಲ್ಲವರನ್ನು ಮಾತ್ರ ಎತ್ತಿ ಹಿಡಿಯುತ್ತೇನೆ "

43. "ನನೆ ಬೇಕು ಕೊನೆಬೇಕು ನರನ ಬಾಳುವೆಗೆ"

IX. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1*4=4

44. ಏಕಾಂಗಿ ವೀರನಂತೆ----------- --

----- ------ ---------- ----------- ------

------ -------- ------------- ------------

---------- ------------ -------- ಕತ್ತಲಲ್ಲಿ ನಡೆದನು.

ಅಥವಾ

ಕಾಡು ಕಾಡು ಅಲೆದ -------- ---------

------- -------- ------- ---------------

-------- -------- -------- ----------- ---

----------- -------- ಮಹಾಬೆಳಕೊಂದು ಕಂಡಿತು.

X. ಕೆಳಗಿನ ಪ್ರಶ್ನೆಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1*4=4

45. ಅರ್ಜುನ ಮತ್ತು ಉತ್ತರ ಇವರ ಸಂಭಾಷಣೆಯ ಸ್ವಾರಸ್ಯವನ್ನು ನಿಮ್ಮ ಮೆಚ್ಚುಗೆಯ ಮಾತುಗಳೊಂದಿಗೆ ಬರೆಯಿರಿ.

ಅಥವಾ

ಅರ್ಜುನನ ಪರಾಕ್ರಮದ ಮಾತುಗಳನ್ನು ನೀವು ಮೆಚ್ಚುವ ಅಂಶಗಳೊಡನೆ ಬಣ್ಣಿಸಿರಿ .

XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರ ಬರೆಯಿರಿ. 1*4=4 [2+2]

46. ನಮಸ್ತೇ ಎನ್ನುತ್ತೇವೆ. ನಮಸ್ಕಾರ ಎನ್ನತ್ತೇವೆ. ಆ ರೀತಿ ಹೇಳಿದಾಗ ಎರಡು ಅಂಗೈಗಳನ್ನು ಜೋಡಿಸಿ ಮೇಲೆ ಎತ್ತುತ್ತೇವೆ. ಆ ರೀತಿ ಎತ್ತಿದ್ದರ ಜೊತೆಗೆ ತಲೆಯನ್ನು ಬಾಗಿಸುತ್ತೇವೆ. ಈ ರೀತಿಯ ನಮಸ್ಕಾರ ಮಾಡುವುದರ ಅರ್ಥವಿಶೇಷತೆ ಏನೆಂದರೆ ನಾವೆಲ್ಲ ಆತ್ಮಸ್ವರೂಪರು. ಆದ್ದರಿಂದ ನಾವೆಲ್ಲ ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು. ಆದಕಾರಣ ಪರಸ್ಪರವಾಗಿ ಪ್ರೇಮವನ್ನು ಕೊಟ್ಟು – ಪಡೆದು ಬದುಕಬೇಕಾಗಿದೆ. ಏಕೆಂದರೆ ನಾವೆಲ್ಲ ಪ್ರೇಮ ಸ್ವರೂಪರು. ಪ್ರೇಮವೇ ಆತ್ಮದ ನಿಜವಾದ ಸ್ವರೂಪವಾಗಿದೆ. ನಾವು ಪಡೆದಿರುವ ಬೇರೆ ಬೇರೆ ದೇಹಗಳು ಆತ್ಮದ ನಿಜವಾದ ಸ್ವರೂಪವನ್ನು ಅರಿಯಲು ಅಡ್ಡಿಯಾಗಿವೆ. ಈ ಅಡ್ಡಿಯನ್ನು ಆಗಿಂದಾಗ್ಗೆ ಪಕ್ಕಕ್ಕೆ ತಳ್ಳುವುದೇ ಈ ನಮಸ್ಕಾರ ವಿಧಿಯ ಉದ್ದೇಶ. ನಾವು ಎರಡು ಕೈ ಜೋಡಿಸಿ ಮಾಡುವ ನಮಸ್ಕಾರದ ಅರ್ಥ ಒಂದು ಕೈ ನಾವು, ಇನ್ನೊಂದು ಕೈ ನಾವು ಯಾರಿಗೆ ನಮಸ್ಕಾರ ಹೇಳುತ್ತೇವೆಯೋ ಅವರು. ನಮಸ್ಕಾರ ಮಾಡಿದಾಗ ನಮಗೂ ಅವರಿಗೂ ಇದು ನೆನಪಾಗುತ್ತದೆ. ನೆನಪಾಗಬೇಕು. ಎರಡು ಕೈ ಸೇರಿದರೆ ಚಪ್ಪಾಳೆಯಂತೆ. ಆದರೆ ನಮ್ಮ ನಮಸ್ಕಾರ ಚಪ್ಪಾಳೆಯಲ್ಲ. ಜೋಡಿಸಿದ ಕೈಯನ್ನು ಎತ್ತುವುದು 'ಆತ್ಮೋದ್ಧಾರ' ಎಂದು ನಾವು ತಿಳಿಯಬೇಕಾಗಿದೆ. ಗುರು ಹಿರಿಯರನ್ನು ಕಂಡಾಗ ಗೌರವದಿಂದ ತಲೆಬಾಗಿ ನಮಸ್ಕರಿಸುವುದು ನಮ್ಮ ಸಂಸ್ಕೃತಿಯ ಪ್ರತೀಕ, ಆತ್ಮೋದ್ಧಾರದ ಮಾರ್ಗ. ಜೀವನದಲ್ಲಿ ರೂಢಿಸಿಕೊಳ್ಳಬೇಕಾದ ಒಂದು ಮೌಲ್ಯ. ಈ ರೀತಿಯ ಜೀವನವನ್ನು ರೂಢಿಸಿಕೊಂಡು ನಮ್ಮ ವ್ಯಕ್ತಿತ್ವವನ್ನು ಇನ್ನಷ್ಟು ಸದೃಢವಾಗಿ ರೂಪಿಸಿಕೊಳ್ಳೋಣ. ನಮ್ಮ ಆತ್ಮೋದ್ಧಾರ ನಮ್ಮ ಕೈಯಲ್ಲೇ ಇದೆ.

ಪ್ರಶ್ನೆಗಳು :

46. ಅ) ಆತ್ಮದ ನಿಜವಾದ ಸ್ವರೂಪವನ್ನು ಹೇಗೆ ವಿವರಿಸಬಹುದು?

46. ಬ) ನಮಸ್ಕಾರದ ಅರ್ಥವಿಶೇಷತೆಯೇನು?

**XII.** ಕೆಳಗಿನ ಯಾವುದಾರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1*4=4

47. ವಿದ್ಯಾರ್ಥಿ ಜೀವನದಲ್ಲಿ ಶಿಸ್ತು

ಅಥವಾ

ಗ್ರಂಥಾಲಯದ ಸದ್ಬಳಕೆ

**XIII.** ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*5=5

48. ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ 'ರಚನಾ' ಎಂದು ಭಾವಿಸಿಕೊಂಡು ಶಾಲೆಯಲ್ಲಿ ವನಮಹೋತ್ಸವ ಆಚರಣೆಗೆ ಸಸಿಗಳನ್ನು ಒದಗಿಸುವಂತೆ ಕೋರಿ, ಅರಣ್ಯಾಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಚಾಮರಾಜನಗರದ 'ವಚನ' ಎಂದು ಭಾವಿಸಿಕೊಂಡು ನೀವು ಕೈಗೊಂಡ ಪ್ರವಾಸದ ಬಗ್ಗೆ ಮಡಿಕೇರಿಯಲ್ಲಿರುವ ನಿಮ್ಮ ಗೆಳತಿ 'ಪ್ರಣತಿ' ಗೆ ಒಂದು ಪತ್ರ ಬರೆಯಿರಿ.

# ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ

## 2019–20 ನೇ ಸಾಲಿನ ಮಾದರಿ ಪ್ರಶ್ನೆ ಪತ್ರಿಕೆ –2

ವಿಷಯ: ದ್ವಿತೀಯ ಭಾಷೆ ಕನ್ನಡ (ಖಾಸಗಿ ಅಭ್ಯರ್ಥಿಗಳಿಗೆ) ವಿಷಯ ಸಂಕೇತ: 33 K

ಸಮಯ: 2–45 ಗಂಟೆ ಗರಿಷ್ಠ ಅಂಕಗಳು: 100

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 5*1=5

1.'ಕೆಳಕೆಳಗೆ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.

ಎ) ಅನುಕರಣ ಬಿ) ದ್ವಿರುಕ್ತಿ

ಸಿ) ಜೋಡುನುಡಿ ಡಿ) ಕೃದಂತ

2. 'ಮತ್ತೊಬ್ಬ' ಪದದಲ್ಲಿರುವ ಸಂಧಿ

ಎ) ಲೋಪ ಬಿ) ಆಗಮ

ಸಿ) ಆದೇಶ ಡಿ) ಸವರ್ಣದೀರ್ಘ

3. ಕ್ರಿಯಾಸಮಾಸಕ್ಕೆ ಉದಾಹರಣೆಯಾಗಿರುವ ಪದ

ಎ) ನೆಲಮುಗಿಲು ಬಿ) ಯುಗಾದಿ

ಸಿ) ಮೈಕೊಡವಿ ಡಿ) ಹೊಂಬಾಳೆ

4. "ರಾಜನು ಹಣ್ಣನ್ನು ತಿಂದನು." ಈ ವಾಕ್ಯವು ಇರುವ ಕಾಲ

ಎ) ಭೂತಕಾಲ ಬಿ) ವರ್ತಮಾನಕಾಲ

ಸಿ) ಭವಿಷ್ಯತ್ ಕಾಲ ಡಿ) ಸಂಧ್ಯಾಕಾಲ

5. 'ಪಂಡಿತ' ಪದವು ನಾಮಪದಗಳ ಈ ಗುಂಪಿಗೆ ಸೇರಿದೆ.

ಎ) ರೂಢನಾಮ ಬಿ) ಅಂಕಿತನಾಮ

ಸಿ) ಅನ್ವರ್ಥನಾಮ ಡಿ) ಸರ್ವನಾಮ

II. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ 14*1= 14

6. ಇಂದ್ರನು ತನಗಾದ ಸಂತೋಷವನ್ನು ಯಾವ ರೀತಿ ಪ್ರಕಟಿಸಿದನು?

7. ಇಂದ್ರನಿಗೆ ಗಿಳಿಯನ್ನು ಕಂಡು ಏಕೆ ಆಶ್ಚರ್ಯವಾಯಿತು?

8. ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು?

9. ಪುಟ್ಟರಾಜುರು ಯಾವ ಕಾರಣಕ್ಕೆ ಖಾದಿಬಟ್ಟೆ ತೊಡಲು ನಿರ್ಧರಿಸಿದರು?

10. ಹಕ್ಕಿಯ ಗೂಡಿನಲ್ಲಿ ಯಾವ ಯಾವ ಭಾವನೆಗಳಿವೆ?

11. ಗುರುಗಳು ಯಾವುದನ್ನು ದುರ್ದೈವದ ಸಂಗತಿಯೆಂದು ಬಣ್ಣಿಸಿದರು?

12. ಥೇಮ್ಸ್ ನದಿಯ ಉತ್ತರ ಭಾಗದಲ್ಲಿ ಎಂತಹವರು ಹೆಚ್ಚಾಗಿ ವಾಸಿಸುತ್ತಾರೆ?

13. ಗೋಪಾಲನು ಹೊಸ ಪಂಚೆಯನ್ನು ಬಯಸಿದುದು ಏಕೆ?

14. ಏಣಿ ಕವನದಲ್ಲಿ ತಿಳಿಸುವಂತೆ ಮೇಲೇರಿದವರು ಯಾವಾಗ ತ್ರಿಶಂಕುಗಳಾಗುತ್ತಾರೆ?

15. ಭೂಮಿತಾಯಿ ಯಾವಾಗ ನವವಧುವಿನಂತೆ ಸಿಂಗಾರಗೊಳ್ಳುತ್ತಾಳೆ?

16. ಯುಗಾದಿಯಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ?

17. ಅಡಿಗರು ತಿಳಿಸುವಂತೆ ಪೌರುಷದ ಬಾಳ್ವೆ ಯಾವುದು?

18. ಯಾವ ಸಂದರ್ಭದಲ್ಲಿ ಕೆರೆಗೆ ಬಾಗಿನ ಅರ್ಪಿಸುವ ವಾಡಿಕೆ ಇದೆ?

19. ವೇಷ ಮತ್ತು ಆಚರಣೆಗಳ ಸಂಬಂಧ ಹೇಗಿರಬೇಕೆಂದು ಸಿದ್ಧರಾಮರು ಹೇಳುತ್ತಾರೆ?

## III. ಕೆಳಗಿನ ಪ್ರಶ್ನೆಗಳಿಗೆ ಮೂರು –ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ . 12*2=24

20. ಇಂದ್ರನ ಪ್ರಕಾರ ಸಾಮಾನ್ಯವಾದ ಲೋಕವರ್ತನೆ ಯಾವುದು?

21. ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಏನಾಗಬಹುದು?

22. ತಾಯಿ ಸಿದ್ದಮ್ಮ ಪುಟ್ಟರಾಜರನ್ನು ಯಾವ ರೀತಿ ಆಶೀರ್ವದಿಸಿದರು?

23. ಹಕ್ಕಿಗಳು ಗೂಡನ್ನು ಕಟ್ಟಲು ಎಂತಹ ಜಾಗವನ್ನು ಆರಿಸಿಕೊಳ್ಳುತ್ತವೆ?

24. ಹಿರಿಯ ವಿದ್ಯಾರ್ಥಿಗಳು ಹೆಡ್‌ಮಾಸ್ತರರ ಹತ್ತಿರ ಯಾವ ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದರು?

25. ಏಣಿ ತಾನು ಎಂತಹವರಿಗೆ ಯಾವ ರೀತಿ ಸ್ಪಂದಿಸುತ್ತೇನೆಂದು ಹೇಳುತ್ತದೆ?

26. ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿ ಹೇಗೆ ತುಂಬಿಕೊಂಡಿತು?

27. ಸದ್ದು ಮಾಡದೆ ಬಾಳಬೇಕು ಎಂಬುದಕ್ಕೆ ಕವಿ ನೀಡುವ ಹೋಲಿಕೆಗಳಾವುವು?

28. ಬಾಳೆಮೀನುಗಳು ಬೊಬ್ಬೆಹೊಡೆಯಲು ಕಾರಣವೇನು?

29. ಅಕ್ಕಮಹಾದೇವಿಯವರು ತಿಳಿಸುವಂತೆ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ಶ್ರೇಷ್ಠ ವಿಚಾರಗಳಾವುವು?

30. 'ಕಳ್ಳರ ಗುರು' ಪಾಠದಿಂದ ನಾವು ತಿಳಿದುಕೊಳ್ಳಬೇಕಾದ ನೀತಿಯೇನು?

31. ಕವಯಿತ್ರಿಯವರು ತಿಳಿಸುವಂತೆ ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕಾಗಿದೆ?

## IV. ಕೆಳಗಿನ ಕವಿ /ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2*3=6

32 . ಬಸವರಾಜ ಸಾದರ

33. ಗುರುರಾಜ ಕರ್ಜಗಿ

## V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ. 1*3=3

34 . ಕೆಸರೊಳಿದ್ದರು ಮೇಲೆ ಬಾಂದಳವ ನೋಡಿ<br>
ಮಿಸುಪ ರವಿಕಿರಣಗಳ ಸಿರಿಗೆ ಮೆರೆದಾಡಿ<br>
ಮಸಗುವಂಬುಜದಂತೆ ಧ್ಯೇಯದಾಳ್ವೆಸಕೆ<br>
ಬಸಮಾಗು, ಬಂದ ಮನುಜತೆಯ ಸಾರ್ಥಕತೆಗೆ.

**VI.** ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿ ಬರೆಯಿರಿ. 1*3=3

35 . 'ನಿಂಬೆಯ ಹಣ್ಣಿನಂತೆ ತುಂಬಿದ ಕುಣಿಗಲು ಕೆರೆ'

**VII.** ಕೆಳಗಿನ ಗಾದೆಮಾತುಗಳಲ್ಲಿ ಯಾವುದಾದರೂ ಎರಡನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ. 2*3=6

36 . "ಬೆಳೆಯುವ ಸಿರಿ ಮೊಳಕೆಯಲ್ಲಿ"

ಅಥವಾ

"ದೇಶ ಸುತ್ತು ಕೋಶ ಓದು"

37. "ಹಾಸಿಗೆ ಇದ್ದಷ್ಟು ಕಾಲುಚಾಚು"

ಅಥವಾ

"ಕುಂಬಾರನಿಗೆ ವರ್ಷ ದೊಣ್ಣೆಗೆ ನಿಮಿಷ"

**VIII.** ಕೆಳಗಿನವುಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ . 6*3=18

38 ."ಒಕ್ಕಲಿಗ ಒಕ್ಕದಿರೆ ಜಗವೆಲ್ಲ ಬಿಕ್ಕುವುದು"

39. "ಇಲ್ಲಿ ವಾಸ್ತುಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ."

40. "ಇವರೆಲ್ಲ ಬಸ್ಸೋ, ರೈಲೋ ಹಿಡಿಯಲು ತರಾತುರಿಯಿಂದ ಹೊರಟಿದ್ದರು."

41. "ಕಾಡು ಕಾಡು ಅಲೆದ ಅವಗೆ ನಾಡಿನರ್ಥ ಹೊಳೆಯಿತು."

42. "ಶಾಂತಿಯಲಿ ಬದುಕಿನೀ ಕರ್ತವ್ಯವನ್ನು ಮುಗಿಸು."

43. "ನೀ ಹಲುಗಿರಿಯೆ ಬಿಡುವೆನೆ ಕಾದು ನಡೆಯೆಂದ."

**IX.** ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1*4=4

44 . ಕಡೆಗೆ ಹಾಯವು ಕಂಗಳೀಬಲ

____________________

________________________________

____________________

____________________

ಮೃಡನು ಶಿವಶಿವ ಕಾದಿಗೆಲಿದೆವು ಬಲಕೆ ನಮೊಯೆಂದ

ಅಥವಾ

ಎಂದೊಡರ್ಜುನ ನಗುತ ರಥವನು

____________________

________________________________

____________________

____________________

ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ

**X ಕೆಳಗಿನ ಪ್ರಶ್ನೆಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** 1*4=4

45. ಗೋಪಾಲನು ತನ್ನ ತಾಯಿಯೊಂದಿಗೆ ನಡೆಸಿದ ಸಂಭಾಷಣೆಯ ಸಾರದಲ್ಲಿ ಜೀವನ ಮೌಲ್ಯವನ್ನು ಗುರುತಿಸಿ ಬರೆಯಿರಿ.

ಅಥವಾ

ಬನದ ಗೋಪಾಲ ಹಾಡಿನಲ್ಲಿ ಭಕ್ತಿಯ ಮಹತ್ತವನ್ನು ಹೇಗೆ ವರ್ಣಿಸಲಾಗಿದೆ ವಿವರಿಸಿ.

**XI ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರ ಬರೆಯಿರಿ.** 1*4=4 [2+2]

46. ಸಿ.ವಿ.ರಾಮನ್ ಶಿಷ್ಯನನ್ನು ಆರಿಸಿಕೊಂಡ ಮೇಲೆ ಅವನಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು, ಅವನನ್ನು ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು. ತಮ್ಮ ಶಿಷ್ಯರೂ ತಮ್ಮಂತೆಯೇ ವಿಜ್ಞಾನದ ಅಭ್ಯಾಸಿಗಳು, ತಮ್ಮ ನಡುವೆ ಮೇಲು ಕೀಳೆಂಬ ತಾರತಮ್ಯವಿರಕೂಡದು, ವಿಜ್ಞಾನದ ಅನ್ವೇಷಣಕಾರ್ಯದಲ್ಲಿ ನಾವೆಲ್ಲ ಸರಿಸಮಾನರಾದ ಕೆಲಸಗಾರರು ಎಂದು ಭಾವಿಸಿದ್ದರು. ಅದರಂತೆಯೇ ನಡೆದುಕೊಳ್ಳುತ್ತಿದ್ದರು. ಶಿಷ್ಯರು ನಡೆಸುವ ಸಂಶೋಧನೆ ಅತ್ಯುತ್ತಮ ವರ್ಗದ್ದಾಗಿರಬೇಕು, ಇತರರನ್ನು ಸುಮ್ಮನೆ ಅನುಸರಿಸುವುದು ಸರ್ವಥಾ ಕೂಡದು, ಸ್ವಂತಿಕೆ ಇರಬೇಕು, ಹೊಸ ದಾರಿಯನ್ನು ಗುರುತಿಸಿ ಮುಂದುವರೆಯಬೇಕು ಎಂದು ಒತ್ತಿ ಒತ್ತಿ ಹೇಳುತ್ತಿದ್ದರು. ಬೆಳಿಗ್ಗೆ ಪ್ರಯೋಗಾಲಯಕ್ಕೆ ಬಂದಕೂಡಲೆ ಒಂದು ಸುತ್ತು ಹೊರಟು ಎಲ್ಲ ಭಾಗಗಳಿಗೂ ಭೇಟಿಯಿತ್ತು, ಪ್ರತಿಯೊಬ್ಬ ಶಿಷ್ಯನೂ ಏನು ಮಾಡುತ್ತಿದ್ದಾನೆ, ಕೆಲಸದಲ್ಲಿ ಅವನ ಪ್ರಗತಿ ಎಷ್ಟು ಎಂದು ವಿಚಾರಿಸುತ್ತಿದ್ದರು. ಮುಂದೆ ಏನು ಮಾಡಬೇಕೆನ್ನುವ ವಿಷಯವಾಗಿ ಸಲಹೆಗಳನ್ನು ಕೊಡುತ್ತಿದ್ದರು. ಶಿಷ್ಯನೇನಾದರೂ ಹೊಸ ವಿಷಯವೊಂದನ್ನು ಬಯಲಿಗೆ ತಂದಿದ್ದನೆಂದರೆ, ಬೆನ್ನುತಟ್ಟಿ, ಅವನನ್ನು ಎಲ್ಲರ ಎದುರಿಗೂ ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಶಿಷ್ಯರು ಗುರುವಿನ ಕೊಂಡಾಟದಿಂದ ಉಬ್ಬಿಹೋಗುತ್ತಿದ್ದರು. ಸಂಶೋಧನೆಗಳನ್ನು ಮತ್ತಷ್ಟು ಹುರುಪಿನಿಂದ ಮುಂದುವರೆಸುತ್ತಿದ್ದರು.

ಪ್ರಶ್ನೆಗಳು :

46. ಅ) ಶಿಷ್ಯರನ್ನು ಕುರಿತು ರಾಮನ್ ಅವರ ಮನೋಭಾವನೆ ಏನಾಗಿತ್ತು?

46. ಬ) ಶಿಷ್ಯರನ್ನು ಹುರಿದುಂಬಿಸುವ ರಾಮನ್ ಅವರ ದೈನಂದಿನ ಕಾರ್ಯವನ್ನು ತಿಳಿಸಿ.

**XII ಕೆಳಗಿನ ಯಾವುದಾರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ.** 1*4=4

47. ಉತ್ತಮ ಹವ್ಯಾಸಗಳು

ಅಥವಾ

ಪ್ರವಾಹದಿಂದಾಗುವ ಅನಾಹುತಗಳು

**XIII** ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.

**1*5=5**

**48**. ನಿಮ್ಮನ್ನು ರಾಮಸಮುದ್ರ ಗ್ರಾಮದಲ್ಲಿರುವ 'ಸುರೇಶ' ಎಂದು ಭಾವಿಸಿಕೊಂಡು, ನಿಮ್ಮ ಊರಿನ ರಸ್ತೆಯನ್ನು ಸರಿಪಡಿಸಿಕೊಡುವಂತೆ ಕೋರಿ ಗ್ರಾಮಪಂಚಾಯಿತಿ ಅಧ್ಯಕ್ಷರಿಗೆ ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ತುಮಕೂರಿನ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿ 'ಉಮ್ಮಿಸಲ್ಮ' ಎಂದು ಭಾವಿಸಿಕೊಂಡು ಶಾಲೆಯಲ್ಲಿ ನಡೆದ ವಿಜ್ಞಾನ ವಸ್ತುಪ್ರದರ್ಶನವನ್ನು ಕುರಿತು ಮಂಡ್ಯದಲ್ಲಿರುವ 'ಅಕ್ಬರ್ ಪಾಷ' ಎಂಬ ಹೆಸರಿನ ತಂದೆಗೆ ಪತ್ರ ಬರೆಯಿರಿ.